# ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ ಬಾಗಲಕೋಟೆ

## ಸೆಕ್ಟರ ನಂ: 24, ನವನಗರ ಬಾಗಲಕೋಟೆ–587 103

ನಂ:ಆಡಳಿತ/ಸಿಬ್ಬಂದಿ/ನೇಮಕಾತಿ/10144/2022

ದಿನಾಂಕ: 10–03–2022

## ನೇಮಕಾತಿ ಪ್ರಕಟಣೆ

ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ ಬಾಗಲಕೋಟೆ ಇದರಲ್ಲಿ ಖಾಲಿಯಿರುವ ಈ ಕೆಳಕಂಡ 110 ವಿವಿಧ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್‌ಲೈನ ಮುಖಾಂತರ **www.bagalkotdccbank.com** ವೆಬ್‌ಸೈಟ್‌ಕ್ಕೆ ಅಪ್‌ಲೋಡ ಮಾಡಿ ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಪ್ರಾರಂಭದ ದಿನಾಂಕ: 11–03–2022 ದಿಂದ 04–04–2022ರ ವರೆಗೆ ಇರುತ್ತದೆ. ಖುದ್ದಾಗಿ/ಅಂಚೆ/ಕೋರಿಯರ್ ಮೂಲಕ ಅರ್ಜಿ ಸಲ್ಲಿಸುವ ಅವಕಾಶವಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ನೇರ ನೇಮಕಾತಿಗೆ ಹೊರಡಿಸಲಾಗಿರುವ ಹುದ್ದೆಗಳ ವಿವರ ಹಾಗೂ ಮೀಸಲಾತಿ ಈ ಕೆಳಗಿನಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

| ಅ ನಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವರ್ಗಗಳ ವಿವರ | ಒಳ ಮೀಸಲಾತಿ | | | | | | | |
|---|---|---|---|---|---|---|---|---|---|---|---|
| | | | | ಸಾಮಾನ್ಯ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜೀ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಅಂಗ ವಿಕಲರು | ಒಟ್ಟು |
| 1 | **ಸಾಫ್ಟವೇರ ಇಂಜನೀಯರ** | 01 | ಪರಿಶಿಷ್ಟ ಪಂಗಡ | **01** | – | – | – | – | – | – | **01** |
| 2 | **ಸಿವ್ಹಿಲ್ ಇಂಜನೀಯರ** | 01 | ಸಾಮಾನ್ಯ | **01** | – | – | – | – | – | – | **01** |
| 3 | **ಗಣಕಯಂತ್ರ ಸಂಯೋಜಕರು** | 02 | ಸಾಮಾನ್ಯ | – | – | – | – | – | – | 01 | 01 |
| | | | ಪ್ರ ವರ್ಗ–2ಎ | 01 | – | – | – | – | – | – | 01 |
| | | | **ಒಟ್ಟು** | **01** | - | - | - | - | - | **01** | **02** |
| 4 | **ಪ್ರಥಮ ದರ್ಜೆ ಸಹಾಯಕರು** | 20 | ಸಾಮಾನ್ಯ | 02 | 03 | 03 | 01 | – | – | 01 | 10 |
| | | | ಪರಿಶಿಷ್ಟ ಜಾತಿ | 02 | 01 | – | 01 | – | – | – | 04 |
| | | | ಪರಿಶಿಷ್ಟ ಪಂಗಡ | – | 01 | – | – | – | – | – | 01 |
| | | | ಪ್ರ ವರ್ಗ–1 | – | – | 01 | – | – | – | – | 01 |
| | | | ಪ್ರ ವರ್ಗ–2ಎ | 02 | – | – | 01 | – | – | – | 03 |
| | | | ಪ್ರ ವರ್ಗ–2ಬಿ | – | – | 01 | – | – | – | – | 01 |
| | | | **ಒಟ್ಟು** | **06** | **05** | **05** | **03** | - | - | **01** | **20** |
| 5 | **ದ್ವಿತೀಯ ದರ್ಜೆ ಸಹಾಯಕರು** | 30 | ಸಾಮಾನ್ಯ | 03 | 04 | 03 | 02 | 01 | 01 | 01 | 15 |
| | | | ಪರಿಶಿಷ್ಟ ಜಾತಿ | – | 02 | 01 | 01 | – | – | – | 04 |
| | | | ಪರಿಶಿಷ್ಟ ಪಂಗಡ | – | – | 01 | – | – | – | – | 01 |
| | | | ಪ್ರ ವರ್ಗ–1 | – | – | – | – | – | – | 01 | 01 |
| | | | ಪ್ರ ವರ್ಗ–2ಎ | – | 02 | 01 | 01 | – | – | – | 04 |
| | | | ಪ್ರ ವರ್ಗ–2ಬಿ | – | – | 01 | – | – | – | 01 | 02 |
| | | | ಪ್ರ ವರ್ಗ–3ಎ | – | – | 01 | – | – | – | – | 01 |
| | | | ಪ್ರ ವರ್ಗ–3ಬಿ | – | – | 01 | – | – | – | 01 | 02 |
| | | | **ಒಟ್ಟು** | **03** | **08** | **09** | **04** | **01** | **01** | **04** | **30** |
| 6 | **ಸಿಪಾಯಿ** | 54 | ಸಾಮಾನ್ಯ | 05 | 08 | 07 | 03 | 02 | 01 | 01 | 27 |
| | | | ಪರಿಶಿಷ್ಟ ಜಾತಿ | 01 | 04 | 01 | – | – | – | 01 | 07 |
| | | | ಪರಿಶಿಷ್ಟ ಪಂಗಡ | – | 01 | 01 | – | – | – | – | 02 |
| | | | ಪ್ರ ವರ್ಗ–1 | 01 | 01 | – | – | – | – | – | 02 |
| | | | ಪ್ರ ವರ್ಗ–2ಎ | 02 | 03 | 02 | – | – | – | 01 | 08 |
| | | | ಪ್ರ ವರ್ಗ–2ಬಿ | 01 | 01 | 01 | – | – | – | – | 03 |
| | | | ಪ್ರ ವರ್ಗ–3ಎ | 01 | – | 01 | – | – | – | – | 02 |
| | | | ಪ್ರ ವರ್ಗ–3ಬಿ | 01 | 01 | 01 | – | – | – | – | 03 |
| | | | **ಒಟ್ಟು** | **12** | **19** | **14** | **03** | **02** | **01** | **03** | **54** |
| 7 | **ವಾಹನ ಚಾಲಕ** | 02 | ಸಾಮಾನ್ಯ | – | 01 | – | – | – | – | – | 01 |
| | | | ಪರಿಶಿಷ್ಟ ಪಂಗಡ | 01 | – | – | – | – | – | – | 01 |
| | | | ಒಟ್ಟು | **01** | **01** | - | - | - | - | - | **02** |
| | | **110** | **ಅಂತೂ ಒಟ್ಟು** | **25** | **33** | **28** | **10** | **03** | **02** | **09** | **110** |

## 1 ವೇತನ ಶ್ರೇಣಿ:

| | |
|---|---|
| 1) ಸಾಫ್ಟ್‌ವೇರ್ ಇಂಜನೀಯರ | 40900–1100–46400–1250–53900–1450–62600–1650–72500–1900–78200 |
| 2) ಸಿವ್ಹಿಲ್ ಇಂಜನೀಯರ | 40900–1100–46400–1250–53900–1450–62600–1650–72500–1900–78200 |
| 3) ಗಣಕಯಂತ್ರ ಸಂಯೋಜಕರು | 37900–950–39800–1100–46400–250–53900–1450–62600–1650–70850. |
| 4) ಪ್ರಥಮ ದರ್ಜೆ ಸಹಾಯಕರು | 37900–950–39800–1100–46400–250–53900–1450–62600–1650–70850. |
| 5) ದ್ವಿತೀಯ ದರ್ಜೆ ಸಹಾಯಕರು | 33450–850–36000–950–39800–1100–46400–1250–53900–1450–62600. |
| 6) ಸಿಪಾಯಿ | 27650–650–29600–750–32600–850–36000–950–39800–1100–46400–1250–52650. |
| 7) ವಾಹನ ಚಾಲಕರು | 27650–650–29600–750–32600–850–36000–950–39800–1100–46400–1250–52650. |

ಮತ್ತು ನಿಯಮಾನುಸಾರ ತುಟ್ಟಿ ಭತ್ಯೆ ಹಾಗೂ ಇತರ ಭತ್ಯೆಗಳನ್ನು ನೀಡಲಾಗುವದು.

## 2. ವಿದ್ಯಾರ್ಹತೆ:

| | | |
|---|---|---|
| 1 | **ಸಾಫ್ಟ್‌ವೇರ್ ಇಂಜನೀಯರ–01** | ಅಂಗೀಕೃತ ಎ.ಐ.ಸಿ.ಟಿ.ಇ. ನಿಂದ ಪಡೆದ ಪದವಿ ಬಿ.ಇ.(ಗಣಕ ವಿಜ್ಞಾನ), ಬಿಸಿಎ ಇವುಗಳಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿ ಕನಿಷ್ಟ 55 % ಅಂಕ ಪಡೆದಿರಬೇಕು. ಬ್ಯಾಂಕಿಂಗ್ ಸಿಬಿಎಸ್ ತಂತ್ರಾಂಶಕ್ಕೆ ಸಂಬಂಧಿಸಿದ ಕನಿಷ್ಠ 5 ವರ್ಷ ತಾಂತ್ರಿಕ ಸಲಹೆಗಾರರಾಗಿ ಸಂಸ್ಥೆಯ ಅನುಭವ ಹೊಂದಿರಬೇಕು ಹಾಗೂ ಜಾವಾ ಭಾಷೆ ಮತ್ತು ಒರ್‍ಯಾಕಲ್ ಜ್ಞಾನ ಹೊಂದಿರಬೇಕು. |
| 2 | **ಸಿವ್ಹಿಲ್ ಇಂಜನೀಯರ –01** | ಅಂಗೀಕೃತ ಎ.ಐ.ಸಿ.ಟಿ.ಇ. ನಿಂದ ಪಡೆದ ಪದವಿ ಬಿ.ಇ.(ಸಿವ್ಹಿಲ್) ದಲ್ಲಿ ಕನಿಷ್ಟ ಶೇ. 60 % ಅಂಕಗಳೊಂದಿಗೆ ಪದವಿ ಪಡೆದಿರಬೇಕು. ಹಾಗೂ ಕನಿಷ್ಠ 5 ವರ್ಷ ತಾಂತ್ರಿಕ ಸಲಹೆಗಾರರಾಗಿ ಸಂಸ್ಥೆಯ ಅನುಭವ ಹೊಂದಿರಬೇಕು. |
| 3 | **ಗಣಕಯಂತ್ರ ಸಂಯೋಜಕರು–02** | ಅಂಗೀಕೃತ ಎ.ಐ.ಸಿ.ಟಿ.ಇ. ನಿಂದ ಪಡೆದ ಪದವಿ ಬಿ.ಇ/ಬಿ.ಟೆಕ್, ಕಂಪ್ಯೂಟರ ಸಾಯನ್ಸ್/ ಇಲೆಕ್ಟ್ರಾನಿಕ್ಸ್ & ಕಮುನಿಕೇಶನ್, ಬಿ.ಸಿ.ಎ, ಬಿಎಸ್ಸಿ, (ಕಂಪ್ಯೂಟರ ಸಾಯನ್ಸ್) ನಲ್ಲಿ ಕನಿಷ್ಟ ಶೇ. 60% ಅಂಕಗಳೊಂದಿಗೆ ಪದವಿ ಪಡೆದಿರಬೇಕು. ಹಾಗೂ ಕನಿಷ್ಟ 5 ವರ್ಷ ಗಣಕಯಂತ್ರ ಸಂಯೋಜಕರಾಗಿ ಸಂಸ್ಥೆಯ ಅನುಭವ ಹೊಂದಿರಬೇಕು. |
| 4 | **ಪ್ರಥಮ ದರ್ಜೆ ಸಹಾಯಕರು –20** | ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು, ಮತ್ತು ಕನಿಷ್ಟ ಶೇ 55 % ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಟ 50 % ಅಂಕಗಳನ್ನು ಪಡೆದಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥ ಮಾಡಿಕೊಳ್ಳಬೇಕು ಕಂಪ್ಯೂಟರ ಆಪರೇಶನ್ ಮತ್ತು ಅಪ್ಲಿಕೇಶನ ಜ್ಞಾನ ಹೊಂದಿರಬೇಕು. |
| 5 | **ದ್ವಿತೀಯ ದರ್ಜೆ ಸಹಾಯಕರು–30** | ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು, ಮತ್ತು ಕನಿಷ್ಟ ಶೇ 55 % ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಟ 50 % ಅಂಕಗಳನ್ನು ಪಡೆದಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಹಾಗೂ ಅರ್ಥ ಮಾಡಿಕೊಳ್ಳಬೇಕು ಕಂಪ್ಯೂಟರ ಆಪರೇಶನ್ ಮತ್ತು ಅಪ್ಲಿಕೇಶನ ಜ್ಞಾನ ಹೊಂದಿರಬೇಕು. |
| 6 | **ಸಿಪಾಯಿ–54** | ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿರಬೇಕು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. |
| 7 | **ವಾಹನ ಚಾಲಕರು–02** | ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿರಬೇಕು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು ಹಾಗೂ ಲಘು ವಾಹನ ಚಾಲನೆ ಪರವಾನಿಗೆಯೊಂದಿಗೆ 5 ವರ್ಷ ಅನುಭವ ಹೊಂದಿರಬೇಕು. |

## 3. ವಯೋಮಿತಿ:

ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ರೀತ್ಯಾ ಈ ಕೆಳಕಂಡ ಗರೀಷ್ಟ ವಯೋಮಿತಿಗೊಳಪಟ್ಟಿರಬೇಕು.

i) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರ ವರ್ಗ–1 ಅಭ್ಯರ್ಥಿಗಳಿಗೆ – 40 ವರ್ಷಗಳು

ii) ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗೆ (2ಎ,2ಬಿ,3ಎ,3ಬಿ) – 38 ವರ್ಷಗಳು

iii) ಸಾಮಾನ್ಯ ವರ್ಗದ ಅಭ್ಯರ್ಥಿಗೆ – 35 ವರ್ಷಗಳು

iv) ಮಾಜಿ ಸೈನಿಕ ಅಭ್ಯರ್ಥಿಗೆ ಕನಿಷ್ಠ 15 ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿರಬೇಕು ಹಾಗೂ 45 ವರ್ಷ ಮೀರಿರಬಾರದು.

v) ಅಂಗವಿಕಲ/ವಿಧವೆ ಅಭ್ಯರ್ಥಿಗೆ ಗರೀಷ್ಟ ವಯೋಮಿತಿ ಮೇಲ್ಕಂಡಂತೆ ವರ್ಗವಾರು ನಿಗಧಿಪಡಿಸಿರುವ ವಯೋಮಿತಿಗೆ 10 ವರ್ಷ ಸೇರಿಸಿ ಪರಿಗಣಿಸಲಾಗುವುದು.

## 4. ಅರ್ಜಿ ಶುಲ್ಕ:

(ಎ) ಸಾಮಾನ್ಯ ಹಾಗೂ ಹಿಂದುಳಿದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ರೂ. 1000/-

(ಬಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1, ಅಂಗವಿಕಲರು ಹಾಗೂ ಮಾಜಿ ಸೈನಿಕ ಮತ್ತು ವಿಧವಾ ಅಭ್ಯರ್ಥಿಗಳಿಗೆ ರೂ. 500/-

(ಸಿ) ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಡೆಬಿಟ್‌ಕಾರ್ಡ/ಕ್ರೆಡಿಟ್ ಕಾರ್ಡ/ಆನ್‌ಲೈನ/ಯುಪಿಆಯ್ ಮೂಲಕ ನಿಗಧಿತ ಶುಲ್ಕ ಪಾವತಿಸತಕ್ಕದ್ದು.

**ಸೂಚನೆಗಳು:**

ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall Ticket) ಗಳನ್ನು ಅಧಿಕೃತ ವೆಬ್‌ಸೈಟ್ www.bagalkotdccbank.com ದಿಂದ ಡೌನಲೋಡ್ ಮಾಡಿಕೊಂಡು ಲಿಖಿತ ಪರೀಕ್ಷೆಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಹಾಜರಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ/ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

1. ಅಭ್ಯರ್ಥಿಗಳು ಪದವಿ ಎಲ್ಲಾ ಸಮಿಸ್ಟರ್/ವರ್ಷವಾರಗಳ ಕ್ರೋಢಿಕೃತ ಅಂಕಗಳ ಶೇಕಡವಾರು ಆಧಾರದ ಮೇಲೆ ಪ್ರತಿಶತ ಪರಿಗಣಿಸಲಾಗುವದು. ಕಾರಣ ಸಮಿಸ್ಟರ/ವರ್ಷಗಳ ಎಲ್ಲಾ ಅಂಕಗಳ ಪಟ್ಟಿಯನ್ನು ಲಗತ್ತಿಸಬೇಕು.
2. ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು ಆನ್‌ಲೈನ್ ನಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.
3. ಸ್ಪಷ್ಟ ಮಾಹಿತಿಗಳನ್ನು ನೀಡದೆ ಹಾಗೂ ತಪ್ಪು ಮಾಹಿತಿಗಳನ್ನು ಸಲ್ಲಿಸಿದಲ್ಲಿ ಅಂತವರ ಅರ್ಜಿಯನ್ನು ಯಾವುದೇ ನೋಟೀಸ ನೀಡದೆ ತಿರಸ್ಕರಿಸಲಾಗುವದು.
4. ಅರ್ಜಿಯ ಶುಲ್ಕವನ್ನು ಪಾವತಿಸುವುದಕ್ಕೆ ಡೆಬಿಟ್/ಕ್ರೆಡಿಟ್/ಆನ್‌ಲೈನ್/ಯುಪಿಆಯ್ ಮೂಲಕ ನಿಗಧಿತ ಶುಲ್ಕ ಪಾವತಿ ಮಾಡತಕ್ಕದ್ದು ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವದು.
5. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ, ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.
6. ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ನಂತರ ಶುಲ್ಕವನ್ನು ಸಂದಾಯ ಮಾಡಿದಲ್ಲಿ ಅಂತವರ ಅರ್ಜಿಯನ್ನು ತಿರಸ್ಕರಿಸಲಾಗುವದು. ಡಿಡಿ/ಚಕ್ಕ/ಪೋಸ್ಟಲ್ ಆರ್ಡರ/ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.
7. ತಪ್ಪು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತವರ ವಿರುದ್ಧ ಬ್ಯಾಂಕು ಕಾನೂನಿನನ್ವಯ ಸೂಕ್ತ ಕ್ರಮ ಕೈಕೊಳ್ಳಲಾಗುವದು.
8. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
9. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದುರುಗಿಸಲಾಗುವುದಿಲ್ಲ ಅಥವಾ ಇತರೇ ಯಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.
10. ಅರ್ಜಿಗಳನ್ನು ಭರ್ತಿ ಮಾಡಲು ಹಾಗೂ ಶುಲ್ಕ ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿ ಘೋಷಿಸಲ್ಪಟ್ಟರೆ ಆ ಮುಂದಿನ ಕೆಲಸದ ದಿನವು ಅರ್ಜಿಯನ್ನು ಭರ್ತಿ ಮಾಡಲು ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗಿರುತ್ತದೆ.
11. ಆನ್‌ಲೈನ್ (On Line) ಅರ್ಜಿಗಳನ್ನು ಹೊರತುಪಡಿಸಿ ಯಾವುದೇ ರೀತಿ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
12. ಆನ್‌ಲೈನ ಮೂಲಕ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಅಪಲೋಡ್ ಮಾಡಬೇಕಾದ ಪ್ರಮಾಣಪತ್ರ ದಾಖಲಾತಿಗಳನ್ನು ಸ್ಪಷ್ಟವಾಗಿ ಕಾಣುವಂತೆ ಮತ್ತು ಓದಲು ಸಾಧ್ಯವಾಗುವಂತೆ ಸ್ಕ್ಯಾನ್ ಮಾಡಿ ಅಪಲೋಡ ಮಾಡತಕ್ಕದ್ದು.
13. ಈ ಪ್ರಕಟಣೆಯಲ್ಲಿ ತಿಳಿಸಿದಂತೆ ಆಯಾ ಹುದ್ದೆಗಳಿಗೆ ನಿಗಧಿಪಡಿಸಿರುವ ಕನಿಷ್ಟ ವಿದ್ಯಾರ್ಹತೆ ಹೊರತುಪಡಿಸಿ ಇತರೇ ಯಾವುದೇ ವಿದ್ಯಾರ್ಹತೆ ಪರಿಗಣಿಸಲಾಗುವದಿಲ್ಲ.
14. ಅಗತ್ಯವಿರುವ ಹುದ್ದೆಗಳಿಗೆ ಅಗತ್ಯ ವಿದ್ಯಾರ್ಹತೆ ಪಡೆದ ನಂತರ ಆಯಾ ಹುದ್ದೆಗೆ ಸಂಬಂಧಪಟ್ಟ ಸೇವಾ ಅನುಭವದ ದೃಡೀಕರಣ ಪತ್ರವನ್ನು ಕಡ್ಡಾಯವಾಗಿ ಆನ್‌ಲೈನ ನಲ್ಲಿ ಅಪಲೋಡ ಮಾಡುವದು.

15. ಬ್ಯಾಂಕು ಅಭ್ಯರ್ಥಿಯೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸುವುದಿಲ್ಲ.

**ವಿಶೇಷ ಸೂಚನೆ:**

ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ ನಂ: **9036072155**ಕ್ಕೆ ಮತ್ತು ಇಮೇಲ್ recruitapp20@gmail.com ನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ಪಡೆಯಬಹುದು.

## 5. ಆಯ್ಕೆ ವಿಧಾನ:

**ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ವಿಧಾನ:**

ಆನ್‌ಲೈನ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆ ಹಾಗೂ ಅಗತ್ಯ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಿ ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯ ವಿಷಯಗಳ ಹುದ್ದೆವಾರು ವಿವರ ಈ ಕೆಳಗಿನಂತೆ ಇರುತ್ತದೆ.

i) **ಸಾಫ್ಟ್‌ವೇರ್/ಸಿವ್ಹಿಲ್ ಇಂಜನೀಯರ/ಗಣಕಯಂತ್ರ ಸಂಯೋಜಕರ ಹುದ್ದೆಗಳಿಗೆ:**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ-50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ-25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ-25 ಅಂಕಗಳು, ಕಂಪ್ಯೂಟರ್/ ಮಾಹಿತಿ ತಂತ್ರಜ್ಞಾನ/ಬ್ಯಾಂಕಿಂಗ್ ತಂತ್ರಜ್ಞಾನ ಪರೀಕ್ಷೆ-75 ಅಂಕಗಳು ಮತ್ತು ಭಾರತ ಸಂವಿಧಾನಕ್ಕೆ-25 ಅಂಕಗಳನ್ನು ಒಳಗೊಂಡಿರುತ್ತದೆ.

ii) **ಪ್ರಥಮ/ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ:**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ-50 ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ-25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ-25 ಅಂಕಗಳು, ಸಹಕಾರಿ ವಿಷಯಕ್ಕಾಗಿ-50 ಅಂಕಗಳು, ಭಾರತ ಸಂವಿಧಾನಕ್ಕೆ-25 ಅಂಕಗಳು, ಮತ್ತು ವಸ್ತುನಿಷ್ಠ ವಿಷಯಗಳಿಗೆ-25 ಅಂಕಗಳನ್ನು ಒಳಗೊಂಡಿರುತ್ತದೆ.

iii) **ಸಿಪಾಯಿ/ವಾಹನ ಚಾಲಕ ಹುದ್ದೆಗಳಿಗೆ:**

100 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ-50 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ-50 ಅಂಕಗಳನ್ನು ಒಳಗೊಂಡಿರುತ್ತದೆ ಸಂದರ್ಶನ ವೇಳೆಯಲ್ಲಿ ವಾಹನ ಚಾಲಕರಿಗೆ ವಾಹನ ಚಾಲನೆಯ ಪರೀಕ್ಷೆ ನಡೆಸಲಾಗುವದು.

ಈ ಮೇಲಿನ ಎಲ್ಲಾ ಹುದ್ದೆಗಳಿಗೆ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಅಭ್ಯರ್ಥಿಯು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ 85ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಜೊತೆಗೆ ಮೌಖಿಕ ಸಂದರ್ಶನಕ್ಕೆ ಗರಿಷ್ಠ 15 ಅಂಕಗಳನ್ನು ನಿಗಧಿಪಡಿಸಿದ್ದು ಸಂದರ್ಶನದಲ್ಲಿ ಗಳಿಸುವ ಅಂಕಗಳು ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೊಡಿಸಿ ಈ ಆಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅರ್ಹತೆಯ ಆಧಾರದ ಮೇಲೆ ಮಿಸಲಾತಿ ನಿಯಮಗಳನ್ನು ಅನುಸರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ಣಯವೇ ಅಂತಿಮವಾಗಿರುತ್ತದೆ.

## 6. ಜಾತಿ/ಮೀಸಲಾತಿ ಪ್ರಮಾಣ ಪತ್ರ.

ಜಾತಿ/ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಈ ಕೆಳಗಿನಂತೆ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಚಾಲ್ತಿಯಲ್ಲಿರತಕ್ಕದ್ದು ಅಂತಹ ದಾಖಲೆಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಸೌಲಭ್ಯ ಪಡೆಯಲ್ಲಿಚ್ಛಿಸುವ ಅಭ್ಯರ್ಥಿಗಳ ಪ್ರಮಾಣ ಪತ್ರ.
2. ಪ್ರ ವರ್ಗ-2ಎ, 2ಬಿ, 3ಎ, & 3ಬಿ ವರ್ಗದ ಸೌಲಭ್ಯ ಪಡೆಯಲ್ಲಿಚ್ಛಿಸುವ ಅಭ್ಯರ್ಥಿಗಳ ಪ್ರಮಾಣ ಪತ್ರ.
3. **ಗ್ರಾಮೀಣ ಅಭ್ಯರ್ಥಿ:** ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದು ದೃಢೀಕರಿಸಿದ ಪ್ರಮಾಣ ಪತ್ರ.
4. **ಕನ್ನಡ ಮಾಧ್ಯಮ ಅಭ್ಯರ್ಥಿ:** ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಶಾಲಾ ಮುಖ್ಯೋಪಾಧ್ಯಾಯರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದು ದೃಢೀಕರಿಸಿದ ಪ್ರಮಾಣ ಪತ್ರ.

5. **ಯೋಜನಾ ನಿರಾಶ್ರಿತರು**: ಸರ್ಕಾರದ ಆದೇಶದ ಅನುಸಾರ ಯೋಜನಾ ನಿರಾಶ್ರಿತರ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ದೃಢೀಕರಿಸಿದ ಪ್ರಮಾಣ ಪತ್ರ.
6. **ಮಾಜಿ ಸೈನಿಕ ಅಭ್ಯರ್ಥಿ**: ಮಾಜಿ ಸೈನಿಕ ಅಂದರೆ ಭೂ–ಧಳ, ನೌಕಾ–ದಳ, ಮತ್ತು ವಾಯು–ದಳದಲ್ಲಿ ಯಾವುದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಇವರು ಸರ್ಕಾರದ ಜಾರಿಯಲ್ಲಿರುವ ನಿಯಮಗಳನ್ವಯ ದೃಢೀಕರಿಸಿದ ಮಾಜಿ ಸೈನಿಕ ಪ್ರಮಾಣ ಪತ್ರ.
7. **ಅಂಗವಿಕಲ ಅಭ್ಯರ್ಥಿ**: ಸರ್ಕಾರದ ಅಧಿಸೂಚನೆಯಲ್ಲಿ ಆದೇಶಿಸಿದಂತೆ ಅಂಗವಿಕಲರಿಗೆ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ದೃಢೀಕರಿಸಿದ ಪ್ರಮಾಣ ಪತ್ರ.

## 7) ಕಡ್ಡಾಯವಾಗಿ ಹಾಜರ ಪಡಿಸಬೇಕಾದ ದೃಢೀಕರಣ ಪ್ರಮಾಣ ಪತ್ರಗಳು.

ಅರ್ಜಿಯ ಜೊತೆ ಸಂಬಂಧಿಸಿದ ಈ ಕೆಳ ಕಂಡ ಪ್ರಮಾಣ ಪತ್ರಗಳನ್ನು ಆನ್‌ಲೈನದಲ್ಲಿ ತಪ್ಪದೆ **ಸ್ವ ಹಸ್ತಾಕ್ಷರದಿಂದ ದೃಢೀಕರಿಸಿ** ಅಪ್‌ಲೋಡ್ ಮಾಡುವದು ಹಾಗೂ ಮೌಖಿಕ ಸಂದರ್ಶನಕ್ಕೆ ಅರ್ಹರಾದಲ್ಲಿ ಸದರಿ ಮೂಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರ ಪಡಿಸುವದು.

1. ಸ್ವ ಹಸ್ತಾಕ್ಷರ ಇರುವ ಪಾಸ ಪೋರ್ಟ ಅಳತೆಯ ಭಾವ ಚಿತ್ರ
2. ವಿವಿಧ ಹುದ್ದೆಗಳಿಗೆ ನಿಗಧಿಪಡಿಸಿದ ವಿದ್ಯಾರ್ಹತೆಗೆ ಎಲ್ಲಾ ಸೆಮಿಸ್ಟರ್‌ಗಳ/ವರ್ಷಗಳ ಪ್ರಮಾಣ ಪತ್ರಗಳ ಅಂಕ ಪಟ್ಟಿಗಳು.
3. ವಯಸ್ಸಿನ ದೃಢೀಕರಣ ಕುರಿತು ಎಸ್‌ಎಸ್‌ಎಲ್‌ಸಿ ಅಂಕ ಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ.
4. ವಿವಿಧ ಮೀಸಲಾತಿಗಳನ್ನು ಕೋರಿದಲ್ಲಿ ಸರಕಾರ ನಿಗಧಿಪಡಿಸಿದ ನಮೂನೆಯಲ್ಲಿರುವ ಪ್ರಮಾಣ ಪತ್ರ.
5. ಸೇವಾ ಅನುಭವ ಪ್ರಮಾಣ ಪತ್ರ.

## 8) ಇತರೆ ನಿಯಮಗಳು.

1. ಸಂಬಂಧಪಟ್ಟ ಹುದ್ದೆಯನ್ನು ಆಯ್ಕೆ ಮಾಡಿ APPLY ಗುಂಡಿಯನ್ನು ಒತ್ತಿ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿಕೊಂಡು ಎಲ್ಲಾ ವಿವರಗಳು ಸರಿಯಾಗಿ ಇರುತ್ತವೆ ಎಂದು ಖಚಿತ ಪಡಿಸಿಕೊಂಡ ನಂತರ CONTINUE TO UPLOAD THE DOCUMENTS ಗುಂಡಿಯನ್ನು ಒತ್ತಿ ಮುಂದುವರೆಯಿರಿ.
2. ನಂತರ ಬರುವ ದಾಖಲಾತಿ ಅಪ್‌ಲೋಡ್ ಫಾರ್ಮನಲ್ಲಿ ಅಭ್ಯರ್ಥಿಗಳು ಸಂಬಂಧಪಟ್ಟ ವಿದ್ಯಾರ್ಹತೆ, ಸೇವಾ ಅನುಭವ, ಅಂಗವಿಕಲ, ಕನ್ನಡ ಮಾಧ್ಯಮ, ಗ್ರಾಮೀಣ, ಮಾಜಿ ಸೈನಿಕ, ಯೋಜನಾ ನಿರಾಶ್ರಿತ ಹಾಗೂ ವಿಧವೆ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.
3. ಮೊಬೈಲ್, ಕ್ಯಾಮರಾ ಸಹಾಯದಿಂದ ಸೇರೆ ಹಿಡಿದ/ಸ್ಪಷ್ಟತೆ ಇಲ್ಲದಿರುವ ದಾಖಲಾತಿಗಳನ್ನು ಅಪ್‌ಲೋಡ ಮಾಡಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವದು.
4. ಸೇವಾ ಅನುಭವದ ಪ್ರಮಾಣಪತ್ರ ಸಲ್ಲಿಸುವವರು ಆಯಾ ಸಂಸ್ಥೆಯಿಂದ ಪಡೆದ ಪ್ರಮಾಣ ಪತ್ರವನ್ನು ದೃಢೀಕರಿಸಿ ಅಪ್‌ಲೋಡ್ ಮಾಡತಕ್ಕದ್ದು.
5. ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಪಡೆಯಲು ಡೌನ್‌ಲೋಡ್ ಗುಂಡಿಯನ್ನು ಒತ್ತಿ ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಬ್ಯಾಂಕು ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರಪಡಿಸತಕ್ಕದ್ದು.
6. ಅರ್ಜಿಗಳನ್ನು ಭರ್ತಿ ಮಾಡಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ನೇಮಕಾತಿ ಪ್ರಕಟಣೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಟ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು. ಬ್ಯಾಂಕಿನ ಸೇವಾ ನಿಯಮಗಳಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ ಇತರೇ ಯಾವುದೇ ಸಮನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.
7. ಅರ್ಜಿಯಲ್ಲಿ ನಮೂದಿಸಿರುವ ಅಂಕ ಪಟ್ಟಿಗಳು/ಇತರೇ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

8. ಆಯ್ಕೆಯಾದ ನಂತರ ಅಭ್ಯರ್ಥಿಗಳ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರ/ವಿಶ್ವ ವಿದ್ಯಾನಿಲಯಗಳಿಂದ ದೃಡೀಕರಿಸಿಕೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
9. ಅಗತ್ಯ ದಾಖಲಾತಿಗಳ ಸೈಜು, ಗಾತ್ರ ಇತ್ಯಾದಿಗಳು ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ ಕಂಪ್ಯೂಟರ ಪರದೆಯಲ್ಲಿ ಬರುವ ಗಾತ್ರಕ್ಕನುಗುಣವಾಗಿ ಸ್ಕ್ಯಾನ್ ಮಾಡಿ ಅಪ್‌ಲೋಡ ಮಾಡತಕ್ಕದ್ದು.
10. ನೇಮಕಾತಿ ಪ್ರಕ್ರಿಯೆಯು ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನಗಳು ಹಾಗೂ ಆದೇಶಕ್ಕೆ ಒಳಪಟ್ಟಿರುತ್ತದೆ.
11. ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಮೀಸಲಿರಿಸಿದ ವರ್ಗಗಳಲ್ಲಿ ಸಮತಳ ಮೀಸಲಾತಿಗಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಅದೇ ವರ್ಗಕ್ಕೆ ಸೇರಿದ ಇತರೇ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
12. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
13. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರಿಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವದು ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕು ಸೂಚಿಸಲ್ಪಟ್ಟಂತಹ ಭದ್ರತೆಯೊಂದಿಗೆ ನಿಯೋಜಿಸಿದ ಶಾಖೆಯಲ್ಲಿ ಕಾರ್ಯನಿರ್ವಹಿಸಬೇಕು ಹಾಗೂ ಅಭ್ಯರ್ಥಿಯ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತವರ ಸೇವೆಯನ್ನು ಮಾತ್ರ ಖಾಯಂಗೊಳಿಸಲಾಗುವದು.
14. ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ನಿಯಮಾನುಸಾರ ಮತ್ತು ಕರ್ನಾಟಕ ಕಾಯ್ದೆ ವ ನಿಯಮಗಳಿಗೊಳಪಟ್ಟು ಕಾರ್ಯನಿರ್ವಹಿಸಬೇಕಾಗುತ್ತದೆ.
15. ಖೊಟ್ಟಿ ಮಾಹಿತಿ/ದಾಖಲಾತಿಗಳ ಸಲ್ಲಿಕೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.
16. ಲಿಖಿತ ಪರೀಕ್ಷೆಯ ಪ್ರವೇಶ ಪತ್ರವನ್ನು ಅಧಿಕೃತ ವೆಬ್‌ಸೆಟ್‌ನಿಂದ ಡೌನಲೋಡ್ ಮಾಡಿಕೊಂಡು ಅರ್ಹ ಅಭ್ಯರ್ಥಿ ಲಿಖಿತ ಪರೀಕ್ಷೆಯಲ್ಲಿ ಹಾಜರಪಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಬ್ಯಾಂಕು ಹೊಣೆಗಾರ ಇರುವದಿಲ್ಲ

ಸಹಿ/-

ಸ್ಥಳ : ಬಾಗಲಕೋಟೆ

ದಿನಾಂಕ: 10-03-2022

**ಸದಸ್ಯ ಕಾರ್ಯದರ್ಶಿ**
**ಸಿಬ್ಬಂದಿ ನೇಮಕಾತಿ ಸಮೀತಿ ಹಾಗೂ**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ.**
**ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿ.,**
**ಬಾಗಲಕೋಟೆ**